sdmimd

# Vijaya Vani

**Date:** 28-06-2017

Edition: Karnataka

**Language: Kannada**

ವಿಜಯವಾಣಿ ಚಿತ್ರ




ಲಾಸ್ ಏಂಜಲಿಸ್‌ನ ಅನಹೆಮ್ ನಗರದಲ್ಲಿ ನಡೆದ ಸಮಾರಂಭದಲ್ಲಿ ಡಾ.ವೀರೇಂದ್ರ ಹೆಗ್ಗಡೆ ಪ್ರಶಸ್ತಿ ಸ್ವೀಕರಿಸಿದರು.

## ಎಸ್‌ಡಿಎಂಗೆ ಅಂತಾರಾಷ್ಟ್ರೀಯ ಪ್ರಶಸ್ತಿ

» **ಪಿಜಿಡಿಎಂ ಕೋರ್ಸ್‌ಗೆ ಎಸಿಬಿಎಸ್‌ಪಿ ಮಾನ್ಯತೆ**

**ಬೆಳ್ತಂಗಡಿ:** ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯ (ಎಸ್‌ಡಿಎಂಐಎಂಡಿ) ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗೆ (ಪಿಜಿಡಿಎಂ) ಅಮೆರಿಕದ ಅಕ್ರೆಡಿಟೇಷನ್ ಕೌನ್ಸಿಲ್ ಫಾರ್ ಬಿಸಿನೆಸ್ ಸ್ಕೂಲ್ಸ್ ಆ್ಯಂಡ್ ಪ್ರೋಗ್ರಾಮ್ಸ್ (ಎಸಿಬಿಎಸ್‌ಪಿ) ಮಾನ್ಯತೆ ಪ್ರಶಸ್ತಿ ದೊರಕಿದೆ.

ಸೋಮವಾರ ಲಾಸ್ ಏಂಜಲಿಸ್‌ನ ಅನಹೆಮ್ ನಗರದಲ್ಲಿ ನಡೆದ ಸಮಾರಂಭದಲ್ಲಿ ಸಂಸ್ಥೆ ಅಧ್ಯಕ್ಷ ಡಾ.ಡಿ.ವೀರೇಂದ್ರ ಹೆಗ್ಗಡೆ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್‌ರೊಂದಿಗೆ ಡಾ.ಸ್ಟೀವ್ ಪಾರ್ಸ್ಕೆಲ್, ಚೀಫ್ ಅಕ್ರೆಡಿಟೇಷನ್ ಆಫೀಸರ್ ಹಾಗೂ ಡಾ.ರೇ ಎಲ್ಡ್ರೀಡ್ಜ್, ಅಧ್ಯಕ್ಷರು, ಬೋರ್ಡ್ ಆಫ್ ಕಮಿಷನರ್ಸ್ ಅವರಿಂದ ಮಾನ್ಯತೆ ಪ್ರಶಸ್ತಿ ಸ್ವೀಕರಿಸಿದರು.

ಭಾರತದಲ್ಲಿ ಇರುವ ಬಿ ಶಾಲೆಗಳ ಪೈಕಿ ಯುರೋಪಿಯನ್ ಫೌಂಡೇಶನ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಈ ಎರಡೂ ಮಾನ್ಯತೆಗಳನ್ನು ಪಡೆದ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಎಸ್‌ಡಿಎಂಐಎಂಡಿ ಪಾತ್ರವಾಗಿದೆ.

**ACBSP Awards Accreditation to SDMIMD's PGDM**